# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 369(473) |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯಲ್ಲಿ ಸುಳ್ಳು ದಾಖಲೆ ನೀಡಿ ಸ್ಥಳೀಯ ವೃಂದ ಸೇರಿರುವ ಸೇವೆಯಲ್ಲಿರುವ ನೌಕರರ ಕುರಿತು ದೂರುಗಳು ಬಂದಿದೆಯೇ ಬಂದಿದ್ದಲ್ಲಿ, ಸದರಿ ದೂರುಗಳ ಪ್ರಸ್ತುತ ಯಾವ ಹಂತದಲ್ಲಿದೆ; | ಅರಣ್ಯ ಇಲಾಖೆಯಲ್ಲಿ ಸುಳ್ಳು ದಾಖಲೆ ನೀಡಿ ಸ್ಥಳೀಯ ವೃಂದ ಸೇರಿರುವ ಬಗ್ಗೆ ಈ ಕೆಳಗಿನ 03 ಅಧಿಕಾರಿಗಳ ವಿರುದ್ಧ ದೂರುಗಳು ಸ್ವೀಕೃತವಾಗಿರುತ್ತವೆ:-<br>1. ಶ್ರೀ ವಿಜಯ ಕುಮಾರ್ ಬಿ. *(ಪ್ರಸ್ತುತ ವಯೋನಿವೃತ್ತ),*<br>2. ಶ್ರೀ ಪ್ರವೀಣ್ ಚಲವಾದಿ (ಪ್ರಸ್ತುತ ಉಪ ಅರಣ್ಯ ಸಂರಕ್ಷಣಾಧಿಕಾರಿ)<br>3. ಶ್ರೀ ಭಾವಿಕಟ್ಟಿ ಎಂ.ಎಲ್. (ಪ್ರಸ್ತುತ ಉಪ ಅರಣ್ಯ ಸಂರಕ್ಷಣಾಧಿಕಾರಿ*),*<br>ಸದರಿ 03 ಅಧಿಕಾರಿಗಳ ವಿರುದ್ಧದ ದೂರುಗಳ ಕುರಿತು ಕ್ರಮದ ಪ್ರಸ್ತುತ ಹಂತ ಈ ಕೆಳಗಿನಂತಿದೆ:-<br>**1. ಶ್ರೀ ವಿಜಯ ಕುಮಾರ್ ಬಿ.:** ಹೈದರಾಬಾದ್- ಕರ್ನಾಟಕ ಸ್ಥಳೀಯ ವೃಂದಕ್ಕೆ ಸದರಿಯವರ ಆಯ್ಕೆಯನ್ನು ತಹಶೀಲ್ದಾರ್, ಬಳ್ಳಾರಿ ತಾಲ್ಲೂಕು ರವರಿಂದ ಪಡೆದ ಅನುಬಂಧ-ಬಿ (371ಜೆ ಮೇರೆಗೆ ನಿಯಮ 4(ಬಿ) (2) (iii)ರನ್ವಯ) ವಾಸಸ್ಥಳ ಪ್ರಮಾಣ ಪತ್ರ ಸಂಖ್ಯೆ: ಸಂ/ಕಂ/ಹೈ.ಕ/590/2015-16, ದಿನಾಂಕ: 16-06-2015ರ ಆಧಾರದ ಮೇಲೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ3/ಸಿಬ್ಬಂದಿ/ವಿವ-103/2013-14, ದಿನಾಂಕ: 13-10-2015ರಲ್ಲಿ ಪರಿಗಣಿಸಲಾಗಿದ್ದು, ತದನಂತರ ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ ರವರ ಪತ್ರ ಸಂಖ್ಯೆ:ಕಂ/ಇತರೆ/34/2016-17, ದಿನಾಂಕ: 29-12-2016ರಲ್ಲಿ ಶ್ರೀ ವಿಜಯ್‌ಕುಮಾರ್ ಬಿ. ಇವರಿಗೆ ತಹಶೀಲ್ದಾರ್, ಬಳ್ಳಾರಿ ತಾಲ್ಲೂಕು ಇವರು ನೀಡಿದ ಪ್ರಮಾಣ ಪತ್ರವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಮಾತ್ರ ಉಪಯೋಗಿಸುವುದು ಎಂದು ನೀಡಿದ ವರದಿಯನ್ನು ಸ್ವೀಕರಿಸಿದ ನಂತರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: |

| | | |
|---|---|---|
| | | ಬಿ9/ವಅಅ/ವಿವ-5/2017-18, ದಿನಾಂಕ:30-10-2017ರಲ್ಲಿ ಸದರಿಯವರ ಹೆಸರನ್ನು ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದದ ವಲಯ ಅರಣ್ಯಾಧಿಕಾರಿಗಳ ಅಂತಿಮ ಜೇಷ್ಟತಾ ಪಟ್ಟಿಯಿಂದ ಕೈಬಿಟ್ಟು ಸ್ಥಳೀಯೇತರ ವೃಂದದಲ್ಲಿ ಮುಂದುವರಿಸಲಾಗಿತ್ತು. ಈ ಮಧ್ಯೆ ಶ್ರೀ ವಿಜಯ್‌ಕುಮಾರ್ ಬಿ. ಇವರು ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ ರವರ ಪತ್ರ ದಿನಾಂಕ: 29-12-2016 ಮತ್ತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ದಿನಾಂಕ:30-10-2017ನ್ನು ಪ್ರಶ್ನಿಸಿ ದಾಖಲಿಸಿರುವ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು WP No. 49989/2017 (GM-RES)ರ ಆದೇಶ ದಿನಾಂಕ:09-11-2017ರಂತೆ ಸಹಾಯಕ ಆಯುಕ್ತರು, ಬಳ್ಳಾರಿ ಉಪ ವಿಭಾಗ ಇವರು ಜಾರಿಗೊಳಿಸಿದ ಅರ್ಹತಾ ಪ್ರಮಾಣ ಪತ್ರ ಸಂಖ್ಯೆ:RD0038181563325 ದಿನಾಂಕ:06-06-2018ನ್ನು ಪರಿಗಣಿಸಿದ ನಂತರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ9/ನೇಮಕಾತಿ/ವಿವ-5/2017-18, ದಿನಾಂಕ: 07-09-2018ರಲ್ಲಿ ಈ ಹಿಂದೆ ಜಾರಿಗೊಳಿಸಿದ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 13-10-2017ರ ಆದೇಶವನ್ನು ರದ್ದುಪಡಿಸಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ3/ಸಿಬ್ಬಂದಿ/ವಿವ-103/2013-14, ದಿನಾಂಕ:13-10-2015ರಲ್ಲಿ ನಿಗದಿಪಡಿಸಿದ ಜೇಷ್ಟತೆಯನ್ನು ಮುಂದುವರೆಸಲಾಗಿರುತ್ತದೆ.<br>**2. ಶ್ರೀ ಪ್ರವೀಣ್ ಚಲವಾದಿ:** ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದಕ್ಕೆ ಸದರಿಯವರ ಆಯ್ಕೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ, ಶಹಾಪುರ ತಾಲ್ಲೂಕು ರವರು [ವ್ಯಾಸಂಗ ಪ್ರಮಾಣ ಪತ್ರ) (371ಜೆ ರಡಿ ನಿಯಮ 4(ಸಿ) (2) (II)]ನ್ನು ಪರಿಗಣಿಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ3/ಸಿಬ್ಬಂದಿ/ವಿವ-103/2013-14, ದಿನಾಂಕ:06-09-2014ರಲ್ಲಿ ಪರಿಗಣಿಸಲಾಗಿದ್ದು, ತದನಂತರ ಸಹಾಯಕ ಆಯುಕ್ತರು, ಯಾದಗಿರಿ ಉಪ ವಿಭಾಗ ಇವರು ಜಾರಿಗೊಳಿಸಿದ ಅರ್ಹತ ಪ್ರಮಾಣ ಪತ್ರ ಸಂಖ್ಯೆ: RD0039013153748 ದಿನಾಂಕ:29-11-2017ನ್ನು ಸ್ವೀಕೃತವಾಗಿದ್ದು, ಅದರಂತೆ, ಸದರಿ ಹುದ್ದೆಯಲ್ಲಿಯೇ ಮುಂದುವರೆಸಲಾಗಿದೆ.<br>**3. ಶ್ರೀ ಭಾವಿಕಟ್ಟಿ ಎಂ.ಎಲ್:** ಹೈದರಾಬಾದ್- ಕರ್ನಾಟಕ ಸ್ಥಳೀಯ ವೃಂದಕ್ಕೆ ಸದರಿಯವರ ಆಯ್ಕೆಯನ್ನು ತಹಶೀಲ್ದಾರ್, ಗುಲ್ಬರ್ಗಾ ತಾಲ್ಲೂಕು ರವರಿಂದ ಪಡೆದ (371ಜೆ ಮೇರೆಗೆ ನಿಯಮ 4(ಬಿ) (2) (iii)ರನ್ವಯ) ವಾಸಸ್ಥಳ |

| | | |
|---|---|---|
| | | ಪ್ರಮಾಣ ಪತ್ರದ ಆಧಾರದ ಮೇಲೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ3/ಸಿಬ್ಬಂದಿ/ವಿವ-103/2013-14, ದಿನಾಂಕ:06-09-2014ರಲ್ಲಿ ಪರಿಗಣಿಸಲಾಗಿದ್ದು, ಸದರಿಯವರ ವಿರುದ್ಧದ ದೂರಿನ ತನಿಖೆ ಬಾಕಿ ಇರುತ್ತದೆ. |
| ಆ) | ಅರಣ್ಯ ಇಲಾಖೆಯಲ್ಲಿ 371ಜೆ ಅಡಿಯಲ್ಲಿ ಅನುಬಂಧ-ಬಿ ಯಲ್ಲಿ ವಾಸಸ್ಥಳ ಪ್ರಮಾಣ ಪತ್ರ ನೀಡಿ ಸ್ಥಳೀಯರಲ್ಲದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸ್ಥಳೀಯ ವೃಂದಕ್ಕೆ ಸೇರಿ ಬಡ್ತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಬಿ3/ಸಿಬ್ಬಂದಿ/ವಿವ-103/2013-14, ದಿನಾಂಕ:19-07-2014ರಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಯ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ಸ್ಥಳೀಯ ವೃಂದ ಹಾಗೂ ಪ್ರಾದೇಶಿಕ ಸ್ಥಳೀಯ ವೃಂದವನ್ನು ಸೇವಾ ಹಿರಿತನ ಮತ್ತು ರೋಸ್ಟರ್ ಬಿಂದುಗಳ ಅನುಸಾರ ಸೃಜಿಸಿದ ಕರಡು ಪಟ್ಟಿಯನ್ನು ತಯಾರಿಸಿ ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ, ತದನಂತರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿ3/ಸಿಬ್ಬಂದಿ/ವಿವ-103/2013-14, ದಿನಾಂಕ:06-09-2014ರಲ್ಲಿ ಅಂತಿಮವಾಗಿ ಪ್ರಕಟಿಸಲಾಗಿರುತ್ತದೆ.<br><br>ಸದರಿ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಸೇರಿದ ಮೂವರು ಅಧಿಕಾರಿಗಳನ್ನು ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರಿರುವ ಕುರಿತು ಬಂದಿರುವ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಇತ್ತೀಚಿನ ಹಂತದ ವಿವರಗಳನ್ನು ಉಪ ಪ್ರಶ್ನೆ (ಅ)ರಲ್ಲಿ ವಿವರಿಸಲಾಗಿದೆ. |
| ಇ) | ಸೇವೆಯಲ್ಲಿರುವ ಸರ್ಕಾರಿ ನೌಕರರ 371ಜೆ ಅಡಿಯಲ್ಲಿ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಗೆ ಸೇರಲು ಇರುವ ನಿಯಮವೇನು; ಸೇವಾ ಪುಸ್ತಕದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗಿನ ಪ್ರದೇಶದ ಸ್ವಗ್ರಾಮ ನಮೂದಾಗಿರುವ ಸಂದರ್ಭದಲ್ಲಿ ನೌಕರರನ್ನು ಯಾವ ದಾಖಲೆಯ ಆಧಾರದಲ್ಲಿ ಸ್ಥಳೀಯ ವೃಂದ ಸೇರಲು ನಿಯಮಗಳಲ್ಲಿ ಅವಕಾಶವಿದೆ; (ವಿವರ ನೀಡುವುದು) | ಸರ್ಕಾರದ ಅಧಿಸೂಚನೆ-I ಸಂಖ್ಯೆ: ಡಿಪಿಎಆರ್ 43 ಹೆಚ್‌ಕೆಸಿ 2013 ದಿನಾಂಕ:29-01-2014ರಲ್ಲಿ ಅಧಿಸೂಚಿತ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು 2013ರಲ್ಲಿ ವಿಧಿಸಲಾಗಿರುತ್ತದೆ.<br><br>ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು 2013ರ ಅಧ್ಯಾಯ-IIIರಲ್ಲಿನ ನಿಯಮ 5(3)ರಲ್ಲಿ *"ಸೇವಾ ಪುಸ್ತಕದಲ್ಲಿ ನಮೂದಿಸಿರುವುದನ್ನು ಹೊರತುಪಡಿಸಿ, ಬೇರೆ ಸ್ಥಳಕ್ಕಾಗಿ ನೌಕರನು ಕ್ಲೇಮು ಮಾಡಿದ್ದಲ್ಲಿ ಅವನು ಸ್ಥಳೀಯ ವ್ಯಕ್ತಿಯ ಪ್ರವರ್ಗಕ್ಕೆ ಸೇರುತ್ತಾನೆಂದು ಸಕ್ಷಮ ಪ್ರಾಧಿಕಾರದಿಂದ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು"* ಎಂದು ವಿವರಿಸಲಾಗಿದೆ. |

| | | |
|---|---|---|
| ಈ) | 371ಜೆ ಅಡಿಯಲ್ಲಿ ಅನುಬಂಧ-ಬಿ ವಾಸಸ್ಥಳ ಪ್ರಮಾಣ ಪತ್ರ ಸಲ್ಲಿಸಿದ್ದರೂ, ನಿಯಮದಲ್ಲಿ ಅವಕಾಶವಿಲ್ಲದಿದ್ದರೂ ಅಂತಹ ಪ್ರಮಾಣ ಪತ್ರವನ್ನು ಪರಿಗಣಿಸಿ ಸೇವೆಯಲ್ಲಿ ಬಡ್ತಿ ನೀಡಿರುವ ಇಲಾಖೆಯ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; ಕಾನೂನು ಉಲ್ಲಂಘಿಸಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದ್ದರೂ ಅಗತ್ಯ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು? | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿ3/ಸಿಬ್ಬಂದಿ/ವಿವ-103/2013-14, ದಿನಾಂಕ:06-09-2014ರಲ್ಲಿ ಅಂತಿಮವಾಗಿ ಪ್ರಕಟಿಸಿದ ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದಕ್ಕೆ ಸೇರಿದ ವಲಯ ಅರಣ್ಯಾಧಿಕಾರಿ ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಸೇರಿದ ಮೂವರು ಅಧಿಕಾರಿಗಳನ್ನು ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರಿರುವ ಕುರಿತು ಬಂದಿರುವ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಇತ್ತೀಚಿನ ಹಂತದ ವಿವರಗಳನ್ನು ಉಪ ಪ್ರಶ್ನೆ (ಅ)ರಲ್ಲಿ ವಿವರಿಸಲಾಗಿದೆ. ಸದರಿ ಅಧಿಕಾರಿಗಳ ಪೈಕಿ ಕ್ರ.ಸಂ. 3ರಲ್ಲಿನ ಅಧಿಕಾರಿಯ ಕುರಿತು ತನಿಖೆ ಬಾಕಿ ಇದ್ದು, ವಿಚಾರಣೆ ಪೂರ್ಣಗೊಳಿಸಿದ ನಂತರ ವರದಿಯನ್ನು ಆಧರಿಸಿ ಕ್ರಮ ವಹಿಸಲಾಗುತ್ತಿರುವುದರಿಂದ ಈ ಹಂತದಲ್ಲಿ ಇಲಾಖೆಯ ಯಾವುದೇ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ: ಅಪಜೀ 56 ಎಫ್‌ಡಿಇ 2024(ಇ)**

(ಈಶ್ವರ ಬಿ.ಖಂಡ್ರೆ)

ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು